







ತುಂಬ ಇಷ್ಟ. ಕಪ್ಪೆಗಳು, ಹಾವುಗಳು, ಹಕ್ಕಿಗಳು, ಮೀನುಗಳು, ಊಸರವಳ್ಳಿ, ಜೇಡಗಳು, ಬೆಕ್ಕು ಸೇರಿದಂತೆ ಹಲವು ರೀತಿಯ ಪ್ರಾಣಿಗಳು ನಮ್ಮ ಮನೆಯಲ್ಲಿವೆ. ಹಾಗಾಗಿ ನಾನು ಅವುಗಳ ಜೊತೆಗೆ ಸ್ನೇಹ, ಸಲಿಗೆ ಹೊಂದಿದ್ದೇನೆ. ಫೋಟೊಗ್ರಫಿ ನನ್ನ ಹವ್ಯಾಸವಾಗಿದ್ದರಿಂದ ಕೆಲವು ಬಾರಿ ನಾನು ಅವುಗಳ ಫೋಟೊ ತೆಗೆಯುತ್ತೇನೆ.

◆ **ನಿಮ್ಮ ಫೋಟೊಗ್ರಫಿಯಲ್ಲಿನ ವರ್ಣಸಂಯೋಜನೆ ಅದ್ಭುತವಾದದ್ದು. ಅದನ್ನು ಹೇಗೆ ಸಂಯೋಜಿಸುತ್ತೀರಿ?**

ನನ್ನ ಚಿತ್ರಗಳಲ್ಲಿರುವುದು ನಿಜವಾದ ಬಣ್ಣಗಳು. ಕೆಲವೊಮ್ಮೆ ನಾನು ಫೋಟೊಶಾಪ್‌ನಲ್ಲಿ ಸಣ್ಣಪುಟ್ಟ ಎಡಿಟ್ ಮಾಡುತ್ತೇನೆ, ಆದರದು ಕತ್ತರಿಸುವುದು, ತಿರುಗಿಸುವುದು, ಸ್ಯಾಚುರೇಷನ್, ಬ್ರೈಟ್‌ನೆಸ್ ಹೀಗೆ ತುಂಬ ಪ್ರಾಥಮಿಕ ಹಂತದ ಸಂಕಲನವಷ್ಟೆ.

◆ **ಫೋಟೊಗ್ರಫಿಯಲ್ಲಿ ಸಂಕಲನದ ಪಾತ್ರ ಎಂಥದ್ದು?**

ಕೆಲವೊಮ್ಮೆ ಅದು ಬೇಕಾಗುತ್ತದೆ. ಯಾಕೆಂದರೆ ಕೆಲವೊಮ್ಮೆ ಫೋಟೊ ತೆಗೆಯುವಾಗ ಮಂದ ಬೆಳಕಿರುತ್ತದೆ. ಆಗ ಚಿತ್ರದ ಬ್ರೈಟ್‌ನೆಸ್ ಹೆಚ್ಚಿಸಬೇಕಾಗುತ್ತದೆ. ಒಳ್ಳೆಯ ಕಾಂಪೋಸಿಷನ್‌ಗೆ ಚಿತ್ರವನ್ನು ತಿರುಗಿಸಬೇಕಾಗುತ್ತದೆ, ಕತ್ತರಿಸಬೇಕಾಗುತ್ತದೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ನೀವು ಒಳ್ಳೆಯ ಫೋಟೊ ತೆಗೆದರೆ ಅದನ್ನು ಎಡಿಟ್ ಮಾಡುವ ಅಗತ್ಯ ಇರುವುದಿಲ್ಲ. ಅದರ ಮೇಲೆ ನಮ್ಮ ಸಹಿ ಹಾಕಿದರೆ ಸಾಕು.

◆ **ವನ್ಯಜೀವಿ ಛಾಯಾಗ್ರಾಹಕರಾಗಿ ನೀವು ಸಾಕಷ್ಟು ಸಮಯ ಪ್ರಕೃತಿಯ ಜೊತೆಗೆ ಕಳೆಯಬೇಕಾಗುತ್ತದೆ. ಆ ಒಡನಾಟ ನಿಮ್ಮ ಆಂತರಿಕ ಬದುಕನ್ನು ಹೇಗೆ ಸಲಹಿದೆ?**

ಬದುಕಿಗೆ ಬೇಕಾದ ಬಹಳಷ್ಟು ಸಂಗತಿಗಳು ನಮಗೆ ಸಿಗುವುದು ಪ್ರಕೃತಿಯ ಮೂಲಕವೇ. ಹಕ್ಕಿಗಳು ವಸಂತದಲ್ಲಿ ಹೇಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತವೆ, ಸರಿಯಾದ ಕೋನದಲ್ಲಿ ಚಿತ್ರವನ್ನು ತೆಗೆದಾಗ ಕಪ್ಪೆಗಳು ಎಷ್ಟು ಮುದ್ದಾಗಿ ಕಾಣಿಸುತ್ತವೆ, ಜೇಡ ತನ್ನ ಬೇಟೆಯನ್ನು ಹೇಗೆ ಹಿಡಿಯುತ್ತದೆ... ಹೀಗೆ, ಕುತೂಹಲಕಾರಿಯಾದ ಸಂಗತಿಗಳು ಸಾಕಷ್ಟಿವೆ.

◆ **ಎಂದಾದರೂ ಭಾರತಕ್ಕೆ ಬಂದಿದ್ದೀರಾ?**

ಇಲ್ಲ. ಆದರೆ ನಾನು ಭಾರತದ ಹಲವು ಛಾಯಾಗ್ರಹಣ ಸ್ಪರ್ಧೆಗಳಲ್ಲಿ ಭಾಗವಹಿಸಿ ಪದಕಗಳನ್ನು ಪಡೆದಿದ್ದೇನೆ. ‘ಪ್ಯಾಟ್ರೊನೇಜ್ ಫೆಡರೇಷನ್ ಆಫ್ ಇಂಡಿಯನ್ ಫೋಟೊಗ್ರಫಿ’ (ಎಫ್‌ಐಪಿ)ಯಿಂದಲೂ ಬಹುಮಾನ ಪಡೆದಿದ್ದೇನೆ.

ಅಜರ್ ಸೆಟಿಯಾಡಿ ಇನ್‌ಸ್ಟಾಗ್ರಾಮ್ ಖಾತೆ
ಲಿಂಕ್: https://bit.ly/2Yccdtj
ಪ್ರತಿಕ್ರಿಯಿಸಿ: feedback@sudha.co.in